ಇಂತಹ ಸಾವು ನೋವಿನ ಮಹತ್ವ ಏನೂಂತ ಅರ್ಥ ಆಗಿದ್ದು ನಾನೇ ಅಂತಹ ಹೋರಾಟಕ್ಕಿಳಿದ ಮೇಲೆ.

ಆದರೆ ಅವತ್ತಿನಿಂದ ನಾಲ್ಕು ವಿಷ್ಯಗಳು ನನ್ನ ಮನಸ್ಸಿಗಿಳಿದು ಗಟ್ಟಿಯಾಗಿ ಕೂತುಬಿಟ್ಟಿವೆ.

ಅದರಲ್ಲಿ ಒಂದನೇದು, ಆ ಕೃಷ್ಣರಾಯರು ಅವತ್ತಷ್ಟೇ ತೀರ್ಕೊಂಡಿದ್ದ ರಾಮಮೂರ್ತಿ ಕತೆಯನ್ನ ಹೇಳಿದ್ದು. ಏನು ಆ ರಾಮಮೂರ್ತಿ ಬದುಕಿನ ಕೆಚ್ಚು. ಅಬ್ಬಬ್ಬಾ ನಮ್ಮಂತೋರಿಂದ ನಮ್ಮಪ್ಪರಾಣೆ ಆಗಲ್ಲ. ಇವತ್ತಂದ್ರೆ ಇವತ್ತಿನ ತನಕ ಆ ರಾಮಮೂರ್ತಿ ನೆನಪಾದ್ರೆ ಸಾಕು ನನ್ನ ಮೈ ತಂತಾನೆ ಬಾಗಿಬಿಡ್ತದೆ.

ಎರಡನೇದು, ಮೆರವಣಿಗೆ ಪಕ್ಕದಲ್ಲಿ ಗಾರೆ ಮೇಸ್ತ್ರಿಯಂಗೆ ಕಾಣ್ತಿದ್ದ ಕೃಷ್ಣರಾಯರು ತಾವೇನು ಅನ್ನೋದನ್ನ ಆಮೇಲೆ ತೋರಿಸಿದ್ರು. ಎಂಥಾ ಆಲಸಿಯಾಗಿದ್ರೂ ಸ್ವಾರ್ಥಿ ಆಗಿದ್ರೂ ಅವೆಲ್ಲವನ್ನೂ ಕಿತ್ತು ಮೂಲೆಗೆಸೆದು ಅವರ ಬೆನ್ನತ್ತಬೇಕು ಅಂತಾ ಶಕ್ತಿ ಇತ್ತು ಆ ಮನುಷ್ಯನ ಮಾತಿಗೆ.

ಮೂರನೇದು, ನಾನು ಬಾವುಟ ಹಿಡ್ಕೊಂಡು ಕಿರುಚಾಡ್ಕೊಂಡು ಮೆರವಣಿಗೇಲಿ ಹೋಗ್ತಾ ಇದ್ದಿದ್ದನ್ನ ಅದ್ಯಾರು ನನ್ನಪ್ಪನಿಗೆ ಹೇಳಿದ್ರೋ ಗೊತ್ತಿಲ್ಲ. ಸ್ಕೂಲಿಗೆ ಹೋಗಿ ಭಾರೀ ಸುಸ್ತಾದವನಂಗೆ ಮುಖ ಮಾಡ್ಕೊಂಡು ಮನೇಗ್ಬಂದೆ. ನನ್ನ ಸಾಚಾತನಾನ ಸಾಬೀತು ಮಾಡೋಕೆ ನಾನು ಮಾಡಿದ ಅವತಾರ ನೋಡಿಯೇ ನಾನು ಸ್ಕೂಲಿಗೆ ಹೋಗಿಲ್ಲ ಅನ್ನೋದು ನನ್ನಪ್ಪಂಗೆ ಗ್ಯಾರಂಟಿ ಆಗಿತ್ತು. ಅವತ್ತು ನನಗೆ ಎಂಥಾ ಒದೆ ಬಿತ್ತೂಂದ್ರೆ ಸುತ್ತಲ ನಾಲ್ಕು ಮನೆಗಳೋರು ಈ ಅಂದಾನಪ್ಪ ಮಗನ್ನ ಕೊಂದೇ ಹಾಕಿಬಿಟ್ಟ ಅನ್ನೋತರ ಗಾಬರಿ ಮಾಡ್ಕೊಂಡು ನನ್ನನ್ನ ನನ್ನಪ್ಪನಿಂದ ಬಿಡಿಸ್ಕೊಳ್ಳೋಕೆ ಮುಗಿಬಿದ್ದು ಬಂದ್ರು. ಅವರ ಮುಂದೆ ನನ್ನಪ್ಪ ನನಗೊಬ್ಬನಿಗೇ ಅಲ್ಲ ಮಂಗಳಾರತಿ ಮಾಡಿದ್ದು. ಅದು ಯಾರ್ಯಾರಿಗೋ ಬಯಸದೇ ಬಂದ ಭಾಗ್ಯ. ನಾನು ಯಾರ ಜೊತೆ ಹೋಗಿದ್ದೆ ಯಾಕೆ ಹೋಗಿದ್ದೆ ಕರ್ಕೊಂಡು ಹೋದೋರು ಯಾರು ಎಂತದ್ದೂ ಗೊತ್ತಿಲ್ಲ ನನ್ನಪ್ಪಂಗೆ. ಯಾರ್ಯಾರನ್ನೋ ಯಾವ್ಯಾವುದನ್ನೋ ಕಲ್ಪಿಸಿಕೊಂಡು ನನ್ನಪ್ಪ ಬೈದಿದ್ದು ಇದೆಯಲ್ಲ. ಆಹಾ ಎಂಥ ಕನ್ನಡ ಸ್ವಾಮಿ ಅದು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್ ಅಂತಾನಲ್ಲ ಶ್ರೀವಿಜಯ. ಹಾಗಿತ್ತು ನೋಡಿ ಅದರ ಸೊಗಸು. ನನ್ನಪ್ಪನ ಭಾಷಾ ಪ್ರಯೋಗಾನ ಅವತ್ತೇನಾದ್ರೂ ಕೇಳಿಬಿಟ್ಟಿದ್ರೆ ಪಂಪನೂ ಇಲ್ಲ ರನ್ನನೂ ಇಲ್ಲ. ನನ್ನಪ್ಪನ ಬೈಗುಳ ಕಾವ್ಯದ ಮಣ್ಣಿನ ವಾಸನೆ ಮೂಸಿ ನಮ್ಮ ಕವಿಗಳೆಲ್ಲ ಅಡ್ಡಡ್ಡ ಬಿದ್ದುಬಿಡ್ಬೇಕು. ಹಂಗಿತ್ತು ಅದರ ಘಮಲು.

ನಾಲ್ಕನೇದು, ಈ ಅಪ್ಪ ಮಕ್ಕಳ ರಗಳೇಲಿ ವಿಶೇಷವೇನೂ ಇಲ್ಲಾಂತ ಜನರೆಲ್ಲ ಬೇಜಾರು ಮಾಡ್ಕೊಂಡು ಹೋದ್ರು. ನಾನು ಹೆದರ್ಕೊಂಡು ಮೂಲೇಲಿ ಮುದುಡ್ಕೊಂಡಿದ್ದೆ. ನನ್ನ ಹತ್ರಕ್ಕೆ ಬಂದ ಅಪ್ಪನನ್ನು ನೋಡಿ ಮತ್ತೆ ಹೊಡೀತಾನೆ ಅಂದ್ಕೊಂಡೆ. ಅಪ್ಪ ಹಾಗೇನೂ ಮಾಡ್ಲಿಲ್ಲ. ನನ್ನನ್ನ ಎದೆಗೆ ಅವಚಿಕೊಂಡು ಗೊಳೋಂತ ಅತ್ತ. ಏನೂ ಅರೀದ ನನ್ನ ಮುಂದೆ ತನ್ನ ಕಷ್ಟ ಹೇಳ್ಕೊಂಡ. ತಬ್ಬಿಕೊಂಡಿದ್ದ ಅಪ್ಪನ ಕಣ್ಣೀರು ನನ್ನ ಕಿವಿ ಮೇಲೆ ಬಿತ್ತು. ಆಗ ನನಗೆ ಸತ್ತುಹೋದ ರಾಮಮೂರ್ತಿ ನೆನಪಾದ್ರು. 'ಅಪ್ಪಾನೂ ಸತ್ತುಹೋಗ್ತಾನ?' ಎಂದು ಹೆದರಿದೆ. ಅಪ್ಪನ ಸಾವಿನ ಭಯ ಎದೆಗೆ ಆಳವಾಗಿ ಹೊಕ್ಕಿಬಿಟ್ಟಿತು. ಅದಾದ ಮೇಲೆ ನಾನು ಮನಸಿಟ್ಟು ಓದಿದೆ. ಆದರೆ ನಾನು ಕಾಲೇಜಿನಲ್ಲಿ ಓದ್ತಿರುವಾಗ ಕಾಲರಾ ಬಂದು ಅಮ್ಮ ಸತ್ತು ಹೋದಳು. ಅವಳ ಸಾವಿನಿಂದ ಅಪ್ಪ ತತ್ತರಿಸಿಬಿಟ್ಟ. ಆದರೆ ಅಪ್ಪ ದುಃಖ ತೋರಿಸ್ಕೊಂಡಿದ್ದು ಸ್ವಲ್ಪ ದಿನ ಅಷ್ಟೆ.